ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

1

ಶಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ          ದಿನಾಂಕ : DATE : 30/6/20

# ರಾಜ್ಯದಲ್ಲಿ 2ನೇ ದಿನವೂ ಸಾವಿನ ದಾಖಲೆ

# ಒಂದೇ ದಿನ 19 ಬಲಿ!

## ನಿನ್ನೆ 1105 ಮಂದಿಗೆ ಸೋಂಕು | ಒಂದು ದಿನದ 2ನೇ ಗರಿಷ್ಠ ಕೇಸ್

## ಬಳ್ಳಾರಿಯೊಂದರಲ್ಲೇ 13 ಸಾವು | ಕೊರೋನಾ ಏಟಿಗೆ ರಾಜ್ಯ ತತ್ತರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯಕ್ಕೆ ಸತತ 3ನೇ ದಿನ ಕೊರೋನಾ ಮರ್ಮಾಘಾತ ನೀಡಿದ್ದು, ಒಂದೇ ದಿನ ದಾಖಲೆಯ 19 ಬಲಿ ಪಡೆದಿದೆ. ಬಳ್ಳಾರಿಯೊಂದರಲ್ಲೇ 13 ಜನ ಅಸುನೀಗಿದ್ದಾರೆ. ಇದರೊಂದಿಗೆ ರಾಜ್ಯದಲ್ಲಿ ಸಾವನ್ನಪ್ಪಿದವರ ಸಂಖ್ಯೆ 226ಕ್ಕೇರಿದೆ. ಇದೇ ವೇಳೆ, ಸೋಮವಾರ 1105 ಮಂದಿಗೆ ಸೋಂಕು ದೃಢಪಟ್ಟಿದ್ದು ಒಟ್ಟು ಸೋಂಕಿತರ ಸಂಖ್ಯೆ 14295ಕ್ಕೇರಿ 15000 ಗಡಿ ದಾಟುವತ್ತ ದಾಪುಗಾಲಿಟ್ಟಿದೆ.

ವಿವರ ➘ 8

## ದೇಶದಲ್ಲಿ ನಿನ್ನೆ 18584 ಕೇಸ್, 415 ಸಾವು

11

# ಜುಲೈ, ಆಗಸ್ಟಲ್ಲಿ ಮಹಾಸ್ಫೋಟ; ವಾರಕ್ಕೆ 2 ದಿನ ಲಾಕ್‌ಡೌನ್?

## 6 ತಿಂಗಳು ಇದೇ ಸ್ಥಿತಿ: ರಾಜ್ಯ ಸರ್ಕಾರ ಮುನ್ನೆಚ್ಚರಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮನುಕುಲವನ್ನೇ ತಲ್ಲಣಗೊಳಿಸಿರುವ ಮಹಾಮಾರಿ ಕೊರೋನಾ ಸೋಂಕು ಬರುವ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ತೀವ್ರಗೊಳ್ಳುವ ಸಾಧ್ಯತೆಯಿದ್ದು, ಮುಂದಿನ ಆರು ತಿಂಗಳು ಕಾಲ ರಾಜ್ಯದಲ್ಲಿ ಇದೇ ಪರಿಸ್ಥಿತಿ ಮುಂದುವರಿಯಲಿದೆ ಎಂಬ ಮುನ್ನೆಚ್ಚರಿಕೆಯನ್ನು ರಾಜ್ಯ ಸರ್ಕಾರ ನೀಡಿದೆ.



ಈ ಹಿನ್ನೆಲೆಯಲ್ಲಿ ಬರುವ ಜು.7ರ ನಂತರ ವಾರಾಂತ್ಯದ ಎರಡು ದಿನಗಳ ಕಾಲ ಲಾಕ್‌ಡೌನ್ ಜಾರಿಗೊಳಿಸುವುದೂ ಸೇರಿದಂತೆ ಜನರು ಗುಂಪುಗೂಡಲು ಅವಕಾಶವಿರುವ ಉದ್ಯಾನವನ, ಆಟದ ಮೈದಾನ ಮತ್ತಿತರ ನಿರ್ದಿಷ್ಟ ಸ್ಥಳಗಳಲ್ಲಿ ಮತ್ತೆ ನಿರ್ಬಂಧ ಹೇರುವ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಿದೆ.

ಹೇಗಿದ್ದರೂ ಜು.4ರಂದು ಎಸ್‌ಎಸ್ಎಲ್‌ಸಿ ಪರೀಕ್ಷೆ ಮುಗಿಯಲಿದೆ. ಮರುದಿನ ಭಾನುವಾರ. ಅದೇ ದಿನದಿಂದ ಪ್ರತಿ ಭಾನುವಾರ ಲಾಕ್‌ಡೌನ್ ಮಾಡುವ ಬಗ್ಗೆ ಈಗಾಗಲೇ ಸರ್ಕಾರ ಆದೇಶ ಹೊರಡಿಸಿದೆ.

➘ 6